

ಬನಿತಾ ಸಂಧು

ಚಿತ್ರ: **ಅಕ್ಟೋಬರ್**
ನಿರ್ಮಾಣ: **ರಾನಿ ಲಾಹಿರಿ, ಶೀಲ್ ಕುಮಾರ್**
ಭಾಷೆ: **ಹಿಂದಿ**
ನಿರ್ದೇಶನ: **ಶೂಜಿತ್ ಸರ್ಕಾರ್**
ತಾರಾಗಣ: **ವರುಣ್ ಧವನ್, ಬನಿತಾ ಸಂಧು, ಗೀತಾಂಜಲಿ ರಾವ್**

ಎಂಬ ಸ್ಥಿತಿಯ ಇಪ್ಪತ್ತೊಂದು ವಯಸ್ಸಿನ ನಾಯಕಿ ಹಾಗೂ ಅವಳ ತಾಯಿಯ ಪಾತ್ರಗಳು ಅತಿ ಸಹಜ ಎನಿಸುವಷ್ಟು ಗಟ್ಟಿಯಾಗಿವೆ.

ನಾಯಕಿಯ ತಾಯಿ ಕಂಪಿಸುವಾಗಲೆಲ್ಲ ಉಡಾಳನಂತೆ ಕಂಡೂ ಹೃದಯಶ್ರೀಮಂತಿಕೆ ಮೆರೆಯುವ ನಾಯಕ ಟಾನಿಕ್.

'ಪಾರಿಜಾತದಂಥ ನಾಯಕಿ' ಕೊನೆಗೂ ಬದುಕುವುದಿಲ್ಲ. ಆದರೆ, ಅವಳು ನೆಟ್ಟ ಹೂಗಿಡ ನಾಯಕನ ಪಾಲಿಗೆ; ಹೂಬಟ್ಟಲ ಬೀಳಿಸಿದ್ದ ಅದೇ ಸೋಮಾರಿಗೆ.

ಪಾರಿಜಾತದ ಆಯುಸ್ಸು ಕಡಿಮೆ. ಈ ಸಿನಿಮಾದ ನಾಯಕಿಯ ಬದುಕೂ ಹಾಗೆಯೇ. ಅದು ಗೊತ್ತಿದ್ದೂ ಆಘ್ರಾಣಿಸುವ ನಾಯಕನ ಸಹೃದಯ ಕಾಡುವ ಅಂಶ. ಆಸ್ಪತ್ರೆಯ ವಾತಾವರಣ, ಅಲ್ಲಿನ ವೈದ್ಯರು–ನರ್ಸ್‌ಗಳ ಭಿನ್ನಭಾವಗಳು, ನಿಸ್ವಾರ್ಥ ಮನಸ್ಸುಗಳು, ಅವರೊಟ್ಟಿಗೆ ನಾಯಕನ ಹಿತ–ಮಿತವೂ ಚುರುಕೂ ಆದ ಮಾತುಕತೆ ಸಿನಿಮಾವನ್ನು ಇನ್ನೂ ಒಂದು ಹಂತ ಮೇಲಕ್ಕೆತ್ತಿಕೊಂಡು ಹೋಗಿದೆ.

ಅವಿಕ್ ಮುಖ್ಯೋಪಾಧ್ಯಾಯ್ ತೋರಿಸಿರುವ ಕ್ಲೋಸಪ್ ಶಾಟ್‌ಗಳು ಪಾತ್ರಗಳ ಕಣ್ಣ ಭಾವನೆಗಳನ್ನು ಹೃದಯಕ್ಕೆ ನಾಟಿಸುತ್ತವೆ.

ಒಂದು ಕಾಲದಲ್ಲಿ ಸಿಕ್ಸ್ ಪ್ಯಾಕ್ ತೋರಿಸಿದ್ದ ವರುಣ್ ಧವನ್, ಈಗ ನಟನಾಗಿ ಹೆಚ್ಚೇ ಮಾಗಿದ್ದಾರೆ. ಅವರ ವೃತ್ತಿಬದುಕಿನಲ್ಲೇ ಇದುವರೆಗಿನ ಶ್ರೇಷ್ಠ ಅಭಿನಯ ಈ ಸಿನಿಮಾದಲ್ಲಿದೆ ಎಂದು ನಿಸ್ಸಂಶಯವಾಗಿ ಹೇಳಬಹುದು. ಮೊದಲ ಚಿತ್ರದಲ್ಲೇ ಬನಿತಾ ಸಂಧು ಅವರದ್ದು ಹಾಸಿಗೆ ಹಿಡಿದ ನಾಯಕಿಯಾಗಿ ಗಮನ ಸೆಳೆಯುವ ಅಭಿನಯ. ಅವರ ತಾಯಿಯ ಪಾತ್ರಧಾರಿ ಗೀತಾಂಜಲಿ ರಾವ್ ನೇತ್ರಾಭಿನಯ ಕಾಡುವಂತಿದೆ.

ಪಾರಿಜಾತದ ಹೂವ ತಂದವರ ರೂಪಕ ಇಷ್ಟಪಡುವ ಮನಸ್ಸುಗಳಿಗೆ ಈ ಆತ್ಮಸಂಗಾತದ ಕಥನ ಇಷ್ಟವಾಗದೇ ಇರಲು ಸಾಧ್ಯವೇ ಇಲ್ಲ.

✿